



(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ

1. ಹಾಮೀಮ್.

حٰمٓ ۚ ①

2. ಈ ಸುಸ್ಪಷ್ಟ ಗ್ರಂಥದಾಣೆ-

وَالْكِتٰبِ الْمُبِيْنِ ۙ ②

3. ನೀವು ಇದನ್ನು ಗ್ರಹಿಸಿಕೊಳ್ಳಲಿಕ್ಕಾಗಿ ನಾವು ಇದನ್ನು ಅರಬೀ ಭಾಷೆಯ ಕುರ್‌ಆನನ್ನಾಗಿ ಮಾಡಿರುತ್ತೇವೆ.[1]

اِنَّا جَعَلْنٰهُ قُرْءٰنًا عَرَبِيًّا لَّعَلَّكُمْ تَعْقِلُوْنَ ۚ ③

4. ವಾಸ್ತವದಲ್ಲಿ ಇದು 'ಉಮ್ಮುಲ್ ಕಿತಾಬ್'(ಮಾತೃ ಗ್ರಂಥ)ನಲ್ಲಿ ಲಿಖಿತವಿದೆ.[2] ನಮ್ಮಲ್ಲಿ ಅತ್ಯುನ್ನತ ಸ್ಥಾನವುಳ್ಳ ಮತ್ತು ಯುಕ್ತಿಭರಿತ ಗ್ರಂಥ.

وَاِنَّهٗ فِيْٓ اُمِّ الْكِتٰبِ لَدَيْنَا لَعَلِيٌّ حَكِيْمٌ ۗ ④

5. ನೀವು ಮಿತಿ ಮೀರಿದವರಾಗಿರುವ ಮಾತ್ರಕ್ಕೆ ನಾವು ಬೇಸರಗೊಂಡು ಈ ಬೋಧನೆಯನ್ನು ನಿಮ್ಮಲ್ಲಿಗೆ ಕಳುಹಿಸಿ ಕೊಡುವುದನ್ನು ಬಿಟ್ಟುಬಿಡಬೇಕೇ?

اَفَنَضْرِبُ عَنْكُمُ الذِّكْرَ صَفْحًا اَنْ كُنْتُمْ قَوْمًا مُّسْرِفِيْنَ ⑤

6. ಗತ ಜನಾಂಗಗಳಲ್ಲೂ ನಾವು ಆಗಾಗ ಪ್ರವಾದಿಗಳನ್ನು ಕಳುಹಿಸಿರುತ್ತೇವೆ.

وَكَمْ اَرْسَلْنَا مِنْ نَّبِيٍّ فِي الْاَوَّلِيْنَ ⑥

7. ಅವರ ಬಳಿಗೆ ಬಂದ ಯಾವ ಪ್ರವಾದಿಯನ್ನೂ ಅವರು ಅಪಹಾಸ್ಯ ಮಾಡದೆ ಬಿಟ್ಟದ್ದಿಲ್ಲ.

وَمَا يَاْتِيْهِمْ مِّنْ نَّبِيٍّ اِلَّا كَانُوْا بِهٖ يَسْتَهْزِءُوْنَ ⑦

1. ಈ ಗ್ರಂಥದ ಕರ್ತೃ 'ನಾವಾಗಿದ್ದೇವೆ', ಮುಹಮ್ಮದ್‌ರಲ್ಲ(ಸ) ಎಂದು ಕುರ್‌ಆನಿನ ಆಣೆ ಹಾಕಲಾಗಿದೆ. ಇದು 'ಸುಸ್ಪಷ್ಟ ಗ್ರಂಥ' ಎಂಬ ಕುರ್‌ಆನಿನ ಗುಣವಿಶೇಷತೆಯನ್ನು ಆಣೆ ಹಾಕಲು ಆರಿಸಲಾಗಿದೆ. ಈ ಗುಣವಿಶೇಷತೆಯೊಂದಿಗೆ 'ಕುರ್‌ಆನ್ ದಿವ್ಯವಾಣಿ'ಯಾಗಿದೆ ಎಂದು ಸ್ವತಃ ಆ ಗ್ರಂಥವೇ ಆಣೆ ಹಾಕುತ್ತಿದೆ. ಆ ಮೂಲಕ ಅದು ಸಾರುತ್ತಿರುವುದೇನೆಂದರೆ, "ಜನರೇ! ಈ ಸುಸ್ಪಷ್ಟ ಗ್ರಂಥ ನಿಮ್ಮ ಮುಂದೆ ಇದೆ. ಅದನ್ನು ಕಣ್ತೆರೆದು ನೋಡಿರಿ. ಅದರ ವಿಷಯಗಳು, ಬೋಧನೆಗಳು, ಭಾಷೆ ಇತ್ಯಾದಿಗಳೆಲ್ಲವೂ ಈ ಗ್ರಂಥದ ಕರ್ತೃ ವಿಶ್ವದೊಡೆಯನಲ್ಲದೆ ಬೇರಾರೂ ಅಲ್ಲ ಎಂಬ ವಾಸ್ತವಿಕತೆಯನ್ನು ದೃಢೀಕರಿಸುತ್ತಿವೆ.
2. 'ಉಮ್ಮುಲ್ ಕಿತಾಬ್' ಎಂದರೆ ಮೂಲಗ್ರಂಥ. ಅರ್ಥಾತ್ ಸಮಸ್ತ ಪ್ರವಾದಿಗಳ(ಅ) ಮೇಲೆ ಅವತೀರ್ಣಗೊಂಡ ಗ್ರಂಥಗಳಿಗೆ ಮೂಲಾಧಾರವಾದ

8. ಇವರಿಗಿಂತ ಅದೆಷ್ಟೋ ಅಧಿಕ ಬಲಶಾಲಿಗಳಾಗಿದ್ದವರನ್ನು ನಾವು ನಾಶಗೊಳಿಸಿ ಬಿಟ್ಟೆವು. ಗತ ಜನಾಂಗಗಳ ಉದಾಹರಣೆಗಳು ಗತಿಸಿ ಹೋಗಿವೆ.

فَأَهْلَكْنَآ أَشَدَّ مِنْهُم بَطْشًا وَمَضَىٰ مَثَلُ ٱلْأَوَّلِينَ ﴿٨﴾

9. ಭೂಮಿ-ಆಕಾಶಗಳನ್ನು ಸೃಷ್ಟಿಸಿದವನಾರೆಂದು ನೀವು ಇವರೊಡನೆ ಕೇಳಿದರೆ, ಅವುಗಳನ್ನು ಪ್ರಬಲನೂ ಸರ್ವಜ್ಞನೂ ಆದವನು ಸೃಷ್ಟಿಸಿದನೆಂದು ಇವರು ಹೇಳುವರು.

وَلَئِن سَأَلْتَهُم مَّنْ خَلَقَ ٱلسَّمَٰوَٰتِ وَٱلْأَرْضَ لَيَقُولُنَّ خَلَقَهُنَّ ٱلْعَزِيزُ ٱلْعَلِيمُ ﴿٩﴾

10. ನಿಮಗಾಗಿ ಈ ಭೂಮಿಯನ್ನು ತೊಟ್ಟಿಲಾಗಿ ಮಾಡಿದವನು ಮತ್ತು ನಿಮಗೆ ಗುರಿ ಮುಟ್ಟುವಂತಾಗಲು ನಿಮಗಾಗಿ ಮಾರ್ಗಗಳನ್ನು ಮಾಡಿದವನೂ ಅವನೇ.[3]

ٱلَّذِى جَعَلَ لَكُمُ ٱلْأَرْضَ مَهْدًا وَجَعَلَ لَكُمْ فِيهَا سُبُلًا لَّعَلَّكُمْ تَهْتَدُونَ ﴿١٠﴾

11. ಅವನು ಆಕಾಶದಿಂದ ಒಂದು ನಿಶ್ಚಿತ ಪ್ರಮಾಣದಲ್ಲಿ ನೀರನ್ನು ಸುರಿಸಿದನು ಮತ್ತು ನಾವು ಅದರ ಮೂಲಕ ಮೃತ ಭೂಮಿಯನ್ನು ಜೀವಂತಗೊಳಿಸಿದೆವು. ಇದೇ ರೀತಿಯಲ್ಲಿ ಒಂದು ದಿನ ನೀವು ಭೂಮಿಯಿಂದ ಹೊರತರಲ್ಪಡುವಿರಿ.

وَٱلَّذِى نَزَّلَ مِنَ ٱلسَّمَآءِ مَآءًۢ بِقَدَرٍ فَأَنشَرْنَا بِهِۦ بَلْدَةً مَّيْتًا ۚ كَذَٰلِكَ تُخْرَجُونَ ﴿١١﴾

12. ಇವೆಲ್ಲ ಜೋಡಿಗಳನ್ನು ಸೃಷ್ಟಿಸಿದವನು ಅವನೇ ಮತ್ತು ಅವನೇ ನಿಮಗಾಗಿ ನಾವೆಗಳನ್ನೂ ಪ್ರಾಣಿಗಳನ್ನೂ ವಾಹನಗಳಾಗಿ ಮಾಡಿದನು.

وَٱلَّذِى خَلَقَ ٱلْأَزْوَٰجَ كُلَّهَا وَجَعَلَ لَكُم مِّنَ ٱلْفُلْكِ وَٱلْأَنْعَٰمِ مَا تَرْكَبُونَ ﴿١٢﴾

13. (ಇದು) ನೀವು ಅವುಗಳ ಬೆನ್ನ ಮೇಲೆ ಸವಾರಿ ಮಾಡುವಂತಾಗಲಿಕ್ಕಾಗಿ ಮತ್ತು ಅವುಗಳ ಮೇಲೆ ಕುಳಿತಾಗ, ನಿಮ್ಮ ಪ್ರಭುವಿನ ಉಪಕಾರವನ್ನು ಸ್ಮರಿಸುತ್ತಾ, ಹೀಗೆ ಹೇಳುವಂತಾಗಲಿಕ್ಕಾಗಿ, "ಇವುಗಳನ್ನು ನಮಗಾಗಿ ನಿಯಂತ್ರಿಸಿ ಕೊಟ್ಟವನು ಪರಮ ಪಾವನನು. ಅನ್ಯಥಾ ನಾವು ಇವುಗಳನ್ನು ಹತೋಟಿಗೆ ತರಲು ಶಕ್ತರಾಗಿರಲಿಲ್ಲ-

لِتَسْتَوُۥا عَلَىٰ ظُهُورِهِۦ ثُمَّ تَذْكُرُوا نِعْمَةَ رَبِّكُمْ إِذَا ٱسْتَوَيْتُمْ عَلَيْهِ وَتَقُولُوا سُبْحَٰنَ ٱلَّذِى سَخَّرَ لَنَا هَٰذَا وَمَا كُنَّا لَهُۥ مُقْرِنِينَ ﴿١٣﴾

14. ಮತ್ತು ನಮಗೊಂದು ದಿನ ನಮ್ಮ ಪ್ರಭುವಿನ ಕಡೆಗೇ ಮರಳಲಿಕ್ಕಿದೆ."

وَإِنَّآ إِلَىٰ رَبِّنَا لَمُنقَلِبُونَ ﴿١٤﴾

ಗ್ರಂಥ. ಇದಕ್ಕೆ ಬುರೂಜ್ ಅಧ್ಯಾಯದಲ್ಲಿ 'ಲೌಹಿನ್ ಮಹ್‌ಫೂಝ್' ಎಂಬ ಪದ ಬಳಕೆಯಾಗಿದೆ. ಅರ್ಥಾತ್ ಬರೆದದ್ದನ್ನು ಅಳಿಸಲಾಗದ ಮತ್ತು ಎಲ್ಲಾ ವಿಧದ ಹಸ್ತಕ್ಷೇಪಗಳಿಂದ ಸುರಕ್ಷಿತವಾದ ಗ್ರಂಥ.

3. ಪರ್ವತಗಳ ನಡು-ನಡುವೆ ಇರುವ ಕಣಿವೆಗಳು. ಗುಡ್ಡಗಾಡು ಮತ್ತು ಬಯಲು ಪ್ರದೇಶದಲ್ಲಿ ಹರಿಯುವ ನದಿಗಳೆಲ್ಲವೂ ಅಲ್ಲಾಹನು ಭೂಮುಖದಲ್ಲಿ ಮಾಡಿರುವ ನೈಸರ್ಗಿಕ ದಾರಿಗಳಾಗಿವೆ. ಅವುಗಳ ನೆರವಿನಿಂದ ಮಾನವ ಭೂಮಿಯಾದ್ಯಂತ ಹರಡಿದ್ದಾನೆ. ಭೂಮುಖವನ್ನು ಸಮಾನ ರೀತಿಯಲ್ಲಿರಿಸದೆ ಅದರಲ್ಲಿ ತರತರದ ವಿವಿಧತೆಯ ಕುರುಹುಗಳನ್ನಿರಿಸಿರುವುದೂ ಅಲ್ಲಾಹನ ಅನುಗ್ರಹವಾಗಿದೆ. ಅವುಗಳ ಆಧಾರದಲ್ಲಿ ಮಾನವ ವಿಭಿನ್ನ ಪ್ರದೇಶಗಳನ್ನು ಗುರುತಿಸುತ್ತಾನೆ ಹಾಗೂ ಎರಡು ಪ್ರದೇಶಗಳ ನಡುವಿನ ವ್ಯತ್ಯಾಸವನ್ನು ಮನಗಾಣುತ್ತಾನೆ.

15. (ಇದನ್ನೆಲ್ಲ ತಿಳಿದಿರುತ್ತ) ಇವರು ಅವನ ದಾಸರಲ್ಲಿ ಕೆಲವರನ್ನು ಅವನ ಅಂಗವಾಗಿ ಮಾಡಿ ಬಿಟ್ಟರು. ವಾಸ್ತವದಲ್ಲಿ ಮಾನವನು ಪ್ರತ್ಯಕ್ಷ ಕೃತಘ್ನನಾಗಿರುತ್ತಾನೆ.

وَجَعَلُوا لَهُۥ مِنْ عِبَادِهِۦ جُزْءًا ۚ إِنَّ
ٱلْإِنسَٰنَ لَكَفُورٌ مُّبِينٌ ﴿١٥﴾

16. ಅಲ್ಲಾಹನು ತನ್ನ ಸೃಷ್ಟಿಯಿಂದ ತನಗಾಗಿ ಪುತ್ರಿಯರನ್ನು ಆಯ್ದುಕೊಂಡು ನಿಮಗೆ ಪುತ್ರರನ್ನು ಪ್ರದಾನ ಮಾಡಿರುವನೇ?

أَمِ ٱتَّخَذَ مِمَّا يَخْلُقُ بَنَاتٍ وَأَصْفَىٰكُم
بِٱلْبَنِينَ ﴿١٦﴾

17. ಇವರು ಯಾವ ಸಂತತಿಯನ್ನು ರಹ್ಮಾನನದೆಂದು (ಅಲ್ಲಾಹನದೆಂದು) ಹೇಳುತ್ತಾರೋ ಅದರ ಜನನದ ಸುವಾರ್ತೆಯನ್ನು ಸ್ವತಃ ಇವರ ಪೈಕಿ ಯಾರಿಗಾದರೂ ನೀಡಲಾದಾಗ ಅವನ ಮುಖ ಕಪ್ಪಿಡುತ್ತದೆ ಮತ್ತು ಅವನು ದುಃಖತಪ್ತನಾಗಿ ಬಿಡುತ್ತಾನೆ.

وَإِذَا بُشِّرَ أَحَدُهُم بِمَا ضَرَبَ
لِلرَّحْمَٰنِ مَثَلًا ظَلَّ وَجْهُهُۥ مُسْوَدًّا
وَهُوَ كَظِيمٌ ﴿١٧﴾

18. ಅಲ್ಲಾಹನ ಪಾಲಿಗೆ ಆಭರಣಗಳಲ್ಲಿ ಸಾಕಲ್ಪಡುವ ಹಾಗೂ ವಾದ-ವಿವಾದದಲ್ಲಿ ತನ್ನ ಮನದಿಂಗಿತವನ್ನು ಚೆನ್ನಾಗಿ ವ್ಯಕ್ತಗೊಳಿಸಲಿಕ್ಕೂ ಸಾಧ್ಯವಾಗದ ಸಂತತಿ ಬಂದಿತೇ?

أَوَمَن يُنَشَّؤُا فِى ٱلْحِلْيَةِ وَهُوَ فِى
ٱلْخِصَامِ غَيْرُ مُبِينٍ ﴿١٨﴾

19. ಇವರು ರಹ್ಮಾನನ ಆಪ್ತ ದಾಸರಾಗಿರುವ ದೇವಚರರನ್ನು ಸ್ತ್ರೀಯರೆಂದು ಪರಿಗಣಿಸಿಕೊಂಡರು. ಅವರ ಶರೀರ ರಚನೆಯನ್ನು ಇವರು ಕಂಡಿದ್ದಾರೆಯೇ? ಇವರ ಸಾಕ್ಷಿಯನ್ನು ಬರೆದಿರಿಸಿಕೊಳ್ಳಲಾಗುವುದು ಮತ್ತು ಇವರು ಇದಕ್ಕೆ ಉತ್ತರ ಕೊಡಬೇಕಾಗುವುದು.

وَجَعَلُوا ٱلْمَلَٰٓئِكَةَ ٱلَّذِينَ هُمْ عِبَٰدُ
ٱلرَّحْمَٰنِ إِنَٰثًا ۚ أَشَهِدُوا خَلْقَهُمْ ۚ
سَتُكْتَبُ شَهَٰدَتُهُمْ وَيُسْـَٔلُونَ ﴿١٩﴾

20. "(ನಾವು ಅವರನ್ನು ಆರಾಧಿಸಬಾರದೆಂದು) ರಹ್ಮಾನನು ಇಚ್ಛಿಸುತ್ತಿದ್ದರೆ ನಾವೆಂದೂ ಅವರನ್ನು ಆರಾಧಿಸುತ್ತಿರಲಿಲ್ಲ" ಎಂದು ಅವರು ಹೇಳುತ್ತಾರೆ.[4] ಇವರಿಗೆ ಇದರ ವಾಸ್ತವಿಕತೆ ಸ್ವಲ್ಪವೂ ತಿಳಿದಿಲ್ಲ. ಇವರು ಕೇವಲ ಊಹಿಸುತ್ತಿದ್ದಾರಷ್ಟೆ.

وَقَالُوا لَوْ شَآءَ ٱلرَّحْمَٰنُ مَا عَبَدْنَٰهُم ۗ
مَّا لَهُم بِذَٰلِكَ مِنْ عِلْمٍ ۖ إِنْ هُمْ
إِلَّا يَخْرُصُونَ ﴿٢٠﴾

21. (ದೇವಚರರನ್ನು ಆರಾಧಿಸುವ ಈ ಕೃತ್ಯಕ್ಕೆ ಆಧಾರವಾಗಿ) ಯಾವುದಾದರೂ ಗ್ರಂಥವನ್ನು ನಾವು ಇವರಿಗೆ ನೀಡಿದ್ದುಂಟೇ?

أَمْ ءَاتَيْنَٰهُمْ كِتَٰبًا مِّن قَبْلِهِۦ فَهُم
بِهِۦ مُسْتَمْسِكُونَ ﴿٢١﴾

22. ಇಲ್ಲ, ವಾಸ್ತವದಲ್ಲಿ ಇವರು ನಮ್ಮ ಪೂರ್ವಜರು ಒಂದು

بَلْ قَالُوٓا إِنَّا وَجَدْنَآ ءَابَآءَنَا عَلَىٰٓ

4. ಹೀಗೆ ಅವರು ತಮ್ಮ ಪಥಭ್ರಷ್ಟತೆಯನ್ನು ಅದೃಷ್ಟದ ಆಧಾರದಲ್ಲಿ ಸಮರ್ಥಿಸುತ್ತಿದ್ದರು. ಎಲ್ಲಾ ಕಾಲಗಳಲ್ಲೂ ದುಷ್ಕೃತ್ಯವೆಸಗುವವರ ಧೋರಣೆ ಇದುವೇ ಆಗಿತ್ತು.

ಪದ್ಧತಿಯಲ್ಲಿದ್ದುದಾಗಿ ನಾವು ಕಂಡಿದ್ದೇವೆ ಮತ್ತು ನಾವು ಅವರ ಹೆಜ್ಜೆ ಗುರುತುಗಳನ್ನೇ ಅನುಸರಿಸುತ್ತೇವೆ ಎಂದು ಹೇಳುತ್ತಾರೆ.

أُمَّةٍ وَّإِنَّا عَلَىٰٓ اٰثٰرِهِمْ مُّهْتَدُوْنَ ﴿٢٢﴾

23. ಈ ರೀತಿ ನಿಮಗಿಂತ ಮುಂಚೆ ನಾವು ಎಚ್ಚರಿಕೆ ನೀಡುವವರನ್ನು ಕಳುಹಿಸಿದ ಪ್ರತಿಯೊಂದು ನಾಡಿನಲ್ಲೂ ಅದರ ಅನುಕೂಲಸ್ಥ ಜನರು, "ನಮ್ಮ ಪೂರ್ವಜರು ಒಂದು ಪದ್ಧತಿಯಲ್ಲಿದ್ದುದಾಗಿ ನಾವು ಕಂಡಿದ್ದೇವೆ ಮತ್ತು ನಾವು ಅವರ ಹೆಜ್ಜೆ ಗುರುತುಗಳನ್ನೇ ಅನುಸರಿಸುತ್ತೇವೆ" ಎಂದೇ ಹೇಳಿದ್ದರು.

وَكَذٰلِكَ مَآ اَرْسَلْنَا مِنْ قَبْلِكَ فِيْ قَرْيَةٍ مِّنْ نَّذِيْرٍ اِلَّا قَالَ مُتْرَفُوْهَآ اِنَّا وَجَدْنَآ اٰبَآءَنَا عَلٰٓى اُمَّةٍ وَّاِنَّا عَلٰٓى اٰثٰرِهِمْ مُّقْتَدُوْنَ ﴿٢٣﴾

24. ಪ್ರತಿಯೊಬ್ಬ ಪ್ರವಾದಿಯೂ ಅವರೊಡನೆ, "ನೀವು ನಿಮ್ಮ ಪೂರ್ವಿಕರನ್ನು ಕಂಡಿದ್ದ ಆ ಮಾರ್ಗಕ್ಕಿಂತ ಹೆಚ್ಚು ಸರಿಯಾದ ಮಾರ್ಗವನ್ನು ನಾನು ನಿಮಗೆ ತೋರಿಸಿಕೊಟ್ಟರೆ ಆಗಲೂ ನೀವು ಅದೇ ಮಾರ್ಗದಲ್ಲಿ ನಡೆಯುವಿರಾ?" ಎಂದು ಕೇಳಿದರು. ಅವರು ಎಲ್ಲ ಪ್ರವಾದಿಗಳಿಗೂ "ನೀವು ಯಾವ ಧರ್ಮದೆಡೆಗೆ ಆಹ್ವಾನಿಸಲು ಕಳುಹಿಸಲ್ಪಟ್ಟಿರುವಿರೋ ನಾವು ಅದನ್ನು ನಿರಾಕರಿಸುವವರಾಗಿದ್ದೇವೆ" ಎಂಬ ಉತ್ತರವನ್ನೇ ಕೊಟ್ಟರು.

قُلْ اَوَلَوْ جِئْتُكُمْ بِاَهْدٰى مِمَّا وَجَدْتُّمْ عَلَيْهِ اٰبَآءَكُمْ ۗ قَالُوْٓا اِنَّا بِمَآ اُرْسِلْتُمْ بِهٖ كٰفِرُوْنَ ﴿٢٤﴾

25. ಕೊನೆಗೆ ನಾವು ಅವರನ್ನು ಶಿಕ್ಷಿಸಿದೆವು ಮತ್ತು ಸುಳ್ಳಾಗಿಸುವವರ ಗತಿ ಏನಾಯಿತೆಂಬುದನ್ನು ನೋಡಿಕೊಳ್ಳಿರಿ.

فَانْتَقَمْنَا مِنْهُمْ فَانْظُرْ كَيْفَ كَانَ عَاقِبَةُ الْمُكَذِّبِيْنَ ﴿٢٥﴾ النصف

26. ಇಬ್‌ರಾಹೀಮರು ತಮ್ಮ ತಂದೆಯೊಡನೆ ಹಾಗೂ ತಮ್ಮ ಜನಾಂಗದೊಡನೆ, ಹೇಳಿದ್ದ ಸಂದರ್ಭವನ್ನು ಸ್ಮರಿಸಿರಿ- "ನೀವು ಯಾರ ಆರಾಧನೆ ಮಾಡುತ್ತೀರೋ ಅವರೊಂದಿಗೆ ನನಗೆ ಯಾವ ಸಂಬಂಧವೂ ಇಲ್ಲ-

وَاِذْ قَالَ اِبْرٰهِيْمُ لِاَبِيْهِ وَقَوْمِهٖٓ اِنَّنِيْ بَرَآءٌ مِّمَّا تَعْبُدُوْنَ ﴿٢٦﴾

27. ನನಗೆ ಸಂಬಂಧವಿರುವುದು ನನ್ನನ್ನು ಸೃಷ್ಟಿಸಿದವನೊಂದಿಗೆ ಮಾತ್ರ. ಅವನೇ ನನಗೆ ಮಾರ್ಗದರ್ಶನ ಮಾಡುವನು".

اِلَّا الَّذِيْ فَطَرَنِيْ فَاِنَّهٗ سَيَهْدِيْنِ ﴿٢٧﴾

28. ಇಬ್‌ರಾಹೀಮರು ಇದೇ ವಚನವನ್ನು ತಮ್ಮ ಬಳಿಕ ತಮ್ಮ ಸಂತತಿಗೆ ಬಿಟ್ಟು ಹೋದರು- ಅವರು ಅದರ ಕಡೆಗೆ ಮರಳುವಂತಾಗಲು.[5]

وَجَعَلَهَا كَلِمَةًۢ بَاقِيَةً فِيْ عَقِبِهٖ لَعَلَّهُمْ يَرْجِعُوْنَ ﴿٢٨﴾

5. ಅರ್ಥಾತ್- ಸನ್ಮಾರ್ಗದಿಂದ ಸ್ವಲ್ಪವಾದರೂ ಪಾದ ವಿಚಲಿತವಾದರೆ ಈ ವಚನ ಅವರ ಮಾರ್ಗದರ್ಶನಕ್ಕೆ ಸಿದ್ಧವಿರುತ್ತದೆ. ಆದ್ದರಿಂದ ಅವರು ಇದರೆಡೆಗೇ ಮರಳಬೇಕಾಗಿದೆ. ಕುರೈಶರ ಪೈಕಿಯ ಸತ್ಯನಿಷೇಧಿಗಳು ಪೂರ್ವಜರ ಅನುಸರಣೆ ಮಾಡುವಾಗಲೂ ಇಬ್‌ರಾಹೀಮ್ ಮತ್ತು ಇಸ್ಮಾಈಲ್‌ರಂತಹ(ಅ) ಅತ್ಯುತ್ತಮ ಪೂರ್ವಜರ ಬದಲು ಕೆಟ್ಟ ಪೂರ್ವಜರನ್ನು ಅನುಸರಿಸಿದರು. ಈ ಬಗ್ಗೆ ಅವರಲ್ಲಿ ನಾಚಿಕೆ ಹುಟ್ಟಿಸುವ ಉದ್ದೇಶದಿಂದ ಈ ಘಟನೆಯನ್ನು ಇಲ್ಲಿ ಪ್ರಸ್ತಾಪಿಸಲಾಗುತ್ತಿದೆ.

29. (ಇಷ್ಟಾಗಿಯೂ ಇವರು ಇತರರ ದಾಸ್ಯ ಮಾಡಲಾರಂಭಿಸಿದಾಗ ನಾನು ಇವರನ್ನು ಅಳಿಸಿ ಬಿಡಲಿಲ್ಲ) ಬದಲಾಗಿ ನಾನು ಇವರಿಗೆ ಮತ್ತು ಇವರ ಪೂರ್ವಜರಿಗೆ ಇವರ ಬಳಿ ಸತ್ಯ ಹಾಗೂ ಸುವ್ಯಕ್ತವಾಗಿ ವಿವರಿಸಿ ಹೇಳುವ ಸಂದೇಶವಾಹಕ ಬರುವವರೆಗೂ ಜೀವನ ಸಾಧನವನ್ನು ಕೊಡುತ್ತಲೇ ಇದ್ದೆನು.

بَلْ مَتَّعْتُ هٰٓؤُلَآءِ وَاٰبَآءَهُمْ حَتّٰى
جَآءَهُمُ الْحَقُّ وَرَسُوْلٌ مُّبِيْنٌ ﴿٢٩﴾

30. ಆದರೆ ಇವರ ಬಳಿಗೆ ಆ ಸತ್ಯವು ಬಂದಾಗ ಇವರು, "ಇದಂತು ಇಂದ್ರಜಾಲ. ನಾವಿದನ್ನು ನಿರಾಕರಿಸುತ್ತೇವೆ" ಎಂದು ಹೇಳಿ ಬಿಟ್ಟರು.

وَلَمَّا جَآءَهُمُ الْحَقُّ قَالُوْا هٰذَا سِحْرٌ
وَّاِنَّا بِهٖ كٰفِرُوْنَ ﴿٣٠﴾

31. ಈ ಕುರ್‌ಆನನ್ನು ಎರಡು ನಗರಗಳ ದೊಡ್ಡವರ ಪೈಕಿ ಯಾರಾದರೊಬ್ಬರ ಮೇಲೆ ಅವತೀರ್ಣಗೊಳಿಸಲಿಲ್ಲವೇಕೆ? ಎಂದು ಕೇಳುತ್ತಾರೆ.[6]

وَقَالُوْا لَوْلَا نُزِّلَ هٰذَا الْقُرْاٰنُ عَلٰى
رَجُلٍ مِّنَ الْقَرْيَتَيْنِ عَظِيْمٍ ﴿٣١﴾

32. ನಿಮ್ಮ ಪ್ರಭುವಿನ ಕೃಪೆಯನ್ನು ವಿತರಿಸುವವರು ಇವರೇನು? ಲೌಕಿಕ ಜೀವನದಲ್ಲಿ ಇವರ ಉಪಜೀವನ ಸಾಧನಗಳನ್ನು ನಾವು ಇವರ ನಡುವೆ ಹಂಚಿದ್ದೇವೆ ಮತ್ತು ಇವರು ಪರಸ್ಪರರಿಂದ ಸೇವೆ ಪಡೆಯುವಂತಾಗಲು ನಾವು ಇವರಲ್ಲಿ ಕೆಲವರಿಗೆ ಇನ್ನು ಕೆಲವರಿಗಿಂತ ಅನೇಕ ಮೇಲ್ಮೆ ನೀಡಿರುವೆವು. ನಿಮ್ಮ ಪ್ರಭುವಿನ ಕೃಪೆಯು (ಪ್ರವಾದಿತ್ವವು) ಇವರು (ಶ್ರೀಮಂತರು) ಶೇಖರಿಸುತ್ತಿರುವ ಸಂಪತ್ತಿಗಿಂತ ಅಧಿಕ ಬೆಲೆಯುಳ್ಳದ್ದಾಗಿದೆ.

اَهُمْ يَقْسِمُوْنَ رَحْمَتَ رَبِّكَ ؕ نَحْنُ
قَسَمْنَا بَيْنَهُمْ مَّعِيْشَتَهُمْ فِى الْحَيٰوةِ
الدُّنْيَا وَرَفَعْنَا بَعْضَهُمْ فَوْقَ بَعْضٍ
دَرَجٰتٍ لِّيَتَّخِذَ بَعْضُهُمْ بَعْضًا سُخْرِيًّا ؕ
وَرَحْمَتُ رَبِّكَ خَيْرٌ مِّمَّا يَجْمَعُوْنَ ﴿٣٢﴾

33-35. ಎಲ್ಲರೂ ಒಂದೇ ಸಮುದಾಯವಾಗಿ ಬಿಡುವರೆಂಬ ಭಯವಿಲ್ಲದಿರುತ್ತಿದ್ದರೆ, ನಾವು "ರಹ್ಮಾನನನ್ನು ನಿರಾಕರಿಸುವವರ ಮನೆಗಳ ಮಾಡುಗಳನ್ನೂ ಅವರು ತಮ್ಮ ಮಾಳಿಗೆ(ಉಪ್ಪರಿಗೆ)ಗಳಿಗೇರುವ ಮೆಟ್ಟಿಲುಗಳನ್ನೂ ಅವರ ಬಾಗಿಲುಗಳನ್ನೂ ಅವರು ಒರಗಿ ಕುಳಿತುಕೊಳ್ಳುವ ಪೀಠಗಳನ್ನೂ ಎಲ್ಲವನ್ನೂ ಬೆಳ್ಳಿ ಬಂಗಾರಗಳನ್ನಾಗಿ ಮಾಡಿ ಬಿಡುತ್ತಿದ್ದೆವು. ಇದಂತು ಕೇವಲ ಲೌಕಿಕ ಜೀವನದ ಸಂಪತ್ತಾಗಿದೆ ಮತ್ತು ಪರಲೋಕವು ನಿಮ್ಮ ಪ್ರಭುವಿನ ಬಳಿ ಧರ್ಮನಿಷ್ಠರಿಗಾಗಿ ಮಾತ್ರ ಇದೆ."

وَلَوْلَآ اَنْ يَّكُوْنَ النَّاسُ اُمَّةً وَّاحِدَةً
لَّجَعَلْنَا لِمَنْ يَّكْفُرُ بِالرَّحْمٰنِ لِبُيُوْتِهِمْ
سُقُفًا مِّنْ فِضَّةٍ وَّمَعَارِجَ عَلَيْهَا
يَظْهَرُوْنَ ﴿٣٣﴾ وَلِبُيُوْتِهِمْ اَبْوَابًا وَّسُرُرًا
عَلَيْهَا يَتَّكِـُٔوْنَ ﴿٣٤﴾ وَزُخْرُفًا ؕ وَاِنْ
كُلُّ ذٰلِكَ لَمَّا مَتَاعُ الْحَيٰوةِ الدُّنْيَا ؕ
وَالْاٰخِرَةُ عِنْدَ رَبِّكَ لِلْمُتَّقِيْنَ ﴿٣٥﴾ نصف

6. ಎರಡೂ ನಗರಗಳೆಂದರೆ ಮಕ್ಕಾ ಮತ್ತು ತಾಯಿಫ್. ಪ್ರವಾದಿಯನ್ನು ಕಳುಹಿಸಿ ಅವರ ಮೇಲೆ ಗ್ರಂಥ ಅವತೀರ್ಣಗೊಳಿಸುವ ಇರಾದೆ ಅಲ್ಲಾಹನಿಗೆ ಇದ್ದಿದ್ದರೆ ನಮ್ಮ ಈ ಎರಡು ಕೇಂದ್ರೀಯ ನಗರಗಳಲ್ಲಿರುವ ಯಾರಾದರೊಬ್ಬ ದೊಡ್ಡ ವ್ಯಕ್ತಿಯನ್ನು ಈ ಉದ್ದೇಶಕ್ಕಾಗಿ ಆರಿಸುತ್ತಿದ್ದ ಎಂಬುದು ಸತ್ಯನಿಷೇಧಿಗಳ ವಾದವಾಗಿತ್ತು.

36. ರಹ್ಮಾನನ 'ಸ್ಮರಣೆ'ಯ ಬಗ್ಗೆ ಅನಾಸ್ಥೆ ವಹಿಸುವವನ ಮೇಲೆ ನಾವೊಬ್ಬ ಶೈತಾನನನ್ನು ನೇಮಿಸಿ ಬಿಡುತ್ತೇವೆ ಮತ್ತು ಅವನು ಆತನ ಆಪ್ತಮಿತ್ರನಾಗಿ ಬಿಡುತ್ತಾನೆ.

وَمَنْ يَّعْشُ عَنْ ذِكْرِ الرَّحْمٰنِ نُقَيِّضْ لَهٗ شَيْطٰنًا فَهُوَ لَهٗ قَرِيْنٌ ﴿٣٦﴾

37. ಈ ಶೈತಾನರು ಇಂತಹವರನ್ನು ಸನ್ಮಾರ್ಗದಿಂದ ತಡೆಯುತ್ತಾರೆ ಮತ್ತು ನಾವು ಸನ್ಮಾರ್ಗದಲ್ಲೇ ಸಾಗುತ್ತಿದ್ದೇವೆಂದು ಅವರು ತಮ್ಮಷ್ಟಕ್ಕೆ ತಿಳಿದುಕೊಂಡಿರುತ್ತಾರೆ.

وَاِنَّهُمْ لَيَصُدُّوْنَهُمْ عَنِ السَّبِيْلِ وَيَحْسَبُوْنَ اَنَّهُمْ مُّهْتَدُوْنَ ﴿٣٧﴾

38. ಕೊನೆಗೆ ಈ ವ್ಯಕ್ತಿ ನಮ್ಮ ಬಳಿಗೆ ಬಂದಾಗ ತನ್ನ ಶೈತಾನನೊಡನೆ, "ಅಯ್ಯೋ! ನನ್ನ ಮತ್ತು ನಿನ್ನ ಮಧ್ಯೆ ಪೂರ್ವ ಪಶ್ಚಿಮಗಳ ಅಂತರವಿರುತ್ತಿದ್ದರೆ! ನೀನಂತು ಅತ್ಯಂತ ನಿಕೃಷ್ಟ ಸಂಗಾತಿಯಾಗಿ ಬಿಟ್ಟೆ" ಎಂದು ಹೇಳುವನು.

حَتّٰٓى اِذَا جَآءَنَا قَالَ يٰلَيْتَ بَيْنِيْ وَبَيْنَكَ بُعْدَ الْمَشْرِقَيْنِ فَبِئْسَ الْقَرِيْنُ ﴿٣٨﴾

39. ಆಗ ಇವರೊಡನೆ- "ನೀವು ಅಕ್ರಮವೆಸಗಿ ಬಿಟ್ಟಿರುವಾಗ, ಇಂದು ಯಾತನೆಯಲ್ಲಿ ನೀವು ಮತ್ತು ನಿಮ್ಮ ಶೈತಾನರು ಸಮಾನ ಪಾಲುದಾರರೆಂಬುದು ನಿಮಗೇನೂ ಫಲಕಾರಿಯಲ್ಲ" ಎನ್ನಲಾಗುವುದು.

وَلَنْ يَّنْفَعَكُمُ الْيَوْمَ اِذْ ظَّلَمْتُمْ اَنَّكُمْ فِى الْعَذَابِ مُشْتَرِكُوْنَ ﴿٣٩﴾

40. ಸಂದೇಶವಾಹಕರೇ, ನೀವೇನು ಕಿವುಡರಿಗೆ ಕೇಳಿಸುವಿರಾ? ಅಥವಾ ಕುರುಡರಿಗೆ ಮತ್ತು ಸುವ್ಯಕ್ತ ಪಥಭ್ರಷ್ಟತೆಯಲ್ಲಿ ಬಿದ್ದಿರುವವರಿಗೆ ಮಾರ್ಗದರ್ಶನ ನೀಡುವಿರಾ?

اَفَاَنْتَ تُسْمِعُ الصُّمَّ اَوْ تَهْدِى الْعُمْىَ وَمَنْ كَانَ فِيْ ضَلٰلٍ مُّبِيْنٍ ﴿٤٠﴾

41-42. ಈಗ ನಾವು ನಿಮ್ಮನ್ನು ಈ ಲೋಕದಿಂದ ಎತ್ತಿಕೊಂಡರೂ ಅಥವಾ ನಾವು ಇವರಿಗೆ ವಾಗ್ದಾನವಿತ್ತಿರುವ ಇವರ ಅಂತಿಮ ಗತಿಯನ್ನು ನಿಮಗೆ ಕಣ್ಣಾರೆ ತೋರಿಸಿದರೂ ನಾವು ಇವರಿಗೆ ಶಿಕ್ಷೆಯನ್ನಂತೂ ಕೊಡಲೇಬೇಕಾಗಿದೆ. ನಮಗೆ ಇವರ ಮೇಲೆ ಸಂಪೂರ್ಣ ನಿಯಂತ್ರಣವಿದೆ.

فَاِمَّا نَذْهَبَنَّ بِكَ فَاِنَّا مِنْهُمْ مُّنْتَقِمُوْنَ ﴿٤١﴾ اَوْ نُرِيَنَّكَ الَّذِيْ وَعَدْنٰهُمْ فَاِنَّا عَلَيْهِمْ مُّقْتَدِرُوْنَ ﴿٤٢﴾

43. ಏನಿದ್ದರೂ ನೀವು 'ದಿವ್ಯವಾಣಿ' ಮೂಲಕ ನಿಮ್ಮ ಬಳಿಗೆ ಕಳುಹಿಸಲಾಗಿರುವ ಈ ಗ್ರಂಥವನ್ನು ಭದ್ರವಾಗಿ ಹಿಡಿದುಕೊಳ್ಳಿರಿ. ಖಂಡಿತವಾಗಿಯೂ ನೀವು ನೇರ ಮಾರ್ಗದಲ್ಲಿದ್ದೀರಿ.

فَاسْتَمْسِكْ بِالَّذِيْٓ اُوْحِيَ اِلَيْكَ ۚ اِنَّكَ عَلٰى صِرَاطٍ مُّسْتَقِيْمٍ ﴿٤٣﴾

44. ವಾಸ್ತವದಲ್ಲಿ ಈ ಗ್ರಂಥವು ನಿಮಗೂ ನಿಮ್ಮ ಜನಾಂಗಕ್ಕೂ

وَاِنَّهٗ لَذِكْرٌ لَّكَ وَلِقَوْمِكَ ۚ وَسَوْفَ

ಒಂದು ಬಹು ದೊಡ್ಡ ಗೌರವವಾಗಿದೆ. ಸದ್ಯದಲ್ಲೇ ನೀವೆಲ್ಲರೂ ಪ್ರಶ್ನಿಸಲ್ಪಡುವಿರಿ.[7]

تُسْـَٔلُوْنَ ﴿٤٤﴾

45. ನಾವು ನಿಮಗಿಂತ ಮುಂಚೆ ಕಳುಹಿಸಿದ್ದ ಎಲ್ಲ ಸಂದೇಶವಾಹಕರೊಡನೆ ಕೇಳಿ ನೋಡಿರಿ: ನಾವು ದಾಸ್ಯಕ್ಕಾಗಿ ರಹ್ಮಾನನ ಹೊರತು ಬೇರೆ ಕೆಲವು ಆರಾಧ್ಯರನ್ನೂ ನಿಶ್ಚಯಿಸಿದ್ದೇವೆಯೇ?"[8]

وَسْـَٔلْ مَنْ اَرْسَلْنَا مِنْ قَبْلِكَ مِنْ رُّسُلِنَآ اَجَعَلْنَا مِنْ دُوْنِ الرَّحْمٰنِ اٰلِهَةً يُّعْبَدُوْنَ ﴿٤٥﴾

46. ನಾವು ಮೂಸಾರನ್ನು ನಮ್ಮ ನಿದರ್ಶನಗಳೊಂದಿಗೆ ಫಿರ್‌ಔನ್ ಮತ್ತು ಅವನ ಆಸ್ಥಾನಿಗರ ಬಳಿಗೆ ರವಾನಿಸಿದೆವು. ಅವರು ಹೋಗಿ, ನಾನು ಸರ್ವಲೋಕ ಪಾಲಕ ಪ್ರಭುವಿನ ಸಂದೇಶವಾಹಕನಾಗಿದ್ದೇನೆಂದು ಹೇಳಿದರು.

وَلَقَدْ اَرْسَلْنَا مُوْسٰى بِاٰيٰتِنَآ اِلٰى فِرْعَوْنَ وَمَلَا۟ئِهٖ فَقَالَ اِنِّيْ رَسُوْلُ رَبِّ الْعٰلَمِيْنَ ﴿٤٦﴾

47. ತರುವಾಯ ಅವರು ನಮ್ಮ ನಿದರ್ಶನಗಳನ್ನು ಅವರ ಮುಂದಿಟ್ಟಾಗ ಅವರು ಗೊಳ್ಳೆಂದು ನಕ್ಕುಬಿಟ್ಟರು.

فَلَمَّا جَآءَهُمْ بِاٰيٰتِنَآ اِذَا هُمْ مِّنْهَا يَضْحَكُوْنَ ﴿٤٧﴾

48. ನಾವು ಅವರಿಗೆ ಒಂದಕ್ಕಿಂತ ಒಂದು ಮಿಗಿಲಾದ ನಿದರ್ಶನಗಳನ್ನು ತೋರಿಸುತ್ತಲೇ ಹೋದೆವು. ಅವರು ತಮ್ಮ ನಿಲುಮೆಯಿಂದ ಹಿಮ್ಮೆಟ್ಟುವಂತಾಗಲು ನಾವು ಅವರನ್ನು ಯಾತನೆಯಲ್ಲಿ ಸಿಲುಕಿಸಿದೆವು.

وَمَا نُرِيْهِمْ مِّنْ اٰيَةٍ اِلَّا هِيَ اَكْبَرُ مِنْ اُخْتِهَا ۫ وَاَخَذْنٰهُمْ بِالْعَذَابِ لَعَلَّهُمْ يَرْجِعُوْنَ ﴿٤٨﴾

49. ಪ್ರತಿಯೊಂದು ಯಾತನೆಯ ವೇಳೆ ಅವರು, "ಜಾದೂಗಾರನೇ, ನಿನ್ನ ಪ್ರಭುವಿನ ವತಿಯಿಂದ ನಿನಗೆ ಪ್ರಾಪ್ತವಾಗಿರುವ ಪದವಿಯ ಆಧಾರದಲ್ಲಿ ನಮಗಾಗಿ ಅವನನ್ನು ಪ್ರಾರ್ಥಿಸು. ನಾವು ಖಂಡಿತವಾಗಿಯೂ ಸನ್ಮಾರ್ಗಕ್ಕೆ ಬಂದು ಬಿಡುವೆವು" ಎನ್ನುತ್ತಿದ್ದರು.

وَقَالُوْا يٰٓاَيُّهَ السّٰحِرُ ادْعُ لَنَا رَبَّكَ بِمَا عَهِدَ عِنْدَكَ ۚ اِنَّنَا لَمُهْتَدُوْنَ ﴿٤٩﴾

50. ಆದರೆ, ನಾವು ಅವರ ಮೇಲಿಂದ ಯಾತನೆಯನ್ನು ಸರಿಸಿದ ಕೂಡಲೇ ಅವರು ತಮ್ಮ ಮಾತಿಗೆ ತಪ್ಪಿ ಬಿಡುತ್ತಿದ್ದರು.

فَلَمَّا كَشَفْنَا عَنْهُمُ الْعَذَابَ اِذَا هُمْ يَنْكُثُوْنَ ﴿٥٠﴾

51. ಒಂದು ದಿನ ಫಿರ್‌ಔನನು ತನ್ನ ಜನಾಂಗದವರ ನಡುವೆ ಕೂಗಿ

وَنَادٰى فِرْعَوْنُ فِيْ قَوْمِهٖ قَالَ يٰقَوْمِ

7. ಅರ್ಥಾತ್- ಒಬ್ಬ ವ್ಯಕ್ತಿಯ ಪಾಲಿಗೆ, ಇತರೆಲ್ಲಾ ವ್ಯಕ್ತಿಗಳನ್ನು ಬಿಟ್ಟು ತನ್ನ ಗ್ರಂಥವನ್ನು ಅವತೀರ್ಣಗೊಳಿಸಲು ಅಲ್ಲಾಹನು ಅವನನ್ನು ಆರಿಸಿಕೊಳ್ಳುವುದಕ್ಕಿಂತ ಮಿಗಿಲಾದ ಸೌಭಾಗ್ಯ ಯಾವುದೂ ಇರಲಾರದು. ಹಾಗೆಯೇ ಒಂದು ಜನಾಂಗದ ಪಾಲಿಗೆ, ಇತರೆಲ್ಲಾ ಜನಾಂಗಗಳನ್ನು ಬಿಟ್ಟು ಆ ಜನಾಂಗದಲ್ಲಿ ಅಲ್ಲಾಹನು ತನ್ನ ಪ್ರವಾದಿಯನ್ನು ಹುಟ್ಟಿಸುವುದು, ಆ ಜನಾಂಗದ ಭಾಷೆಯಲ್ಲೇ ಗ್ರಂಥ ಅವತೀರ್ಣಗೊಳಿಸುವುದು ಮತ್ತು ಅದನ್ನು ಲೋಕದಲ್ಲಿ ದಿವ್ಯಸಂದೇಶದ ವಾಹಕವನ್ನಾಗಿ ಮಾಡುವುದಕ್ಕಿಂತ ಮಿಗಿಲಾದ ಸೌಭಾಗ್ಯ ಬೇರೆ ಇರಲಾರದು. ಈ ಮಹಾನ್ ಸುದೈವದ ಪ್ರಜ್ಞೆ ಕುರೈಶರಿಗೆ ಮತ್ತು ಅರಬರಿಗೆ ಇಲ್ಲವೆಂದಾದರೆ ಮತ್ತು ಅವರು ಅದರ ಬಗ್ಗೆ ಕೃತಘ್ನತೆ ತೋರಬಯಸಿದರೆ ಅದಕ್ಕಾಗಿ ಉತ್ತರ ನೀಡಬೇಕಾದಂತಹ ಕಾಲ ಅವರಿಗೆ ಎದುರಾಗಲಿದೆ.

8. ಪ್ರವಾದಿಗಳೊಂದಿಗೆ ಕೇಳುವುದೆಂದರೆ ಅವರು ತಂದಿರುವ ಗ್ರಂಥಗಳಿಂದ ತಿಳಿದುಕೊಳ್ಳುವುದು.

ಹೇಳಿದನು; "ಜನರೇ, ಈಜಿಪ್ಟಿನ ಚಕ್ರಾಧಿಪತ್ಯ ನನ್ನದಲ್ಲವೇ? ಮತ್ತು ಈ ಕಾಲುವೆಗಳು ನನ್ನ ಅಧೀನದಲ್ಲಿ ಹರಿಯುತ್ತಿಲ್ಲವೇ? ನಿಮಗೇನು ಕಾಣುವುದಿಲ್ಲವೇ?

أَلَيْسَ لِي مُلْكُ مِصْرَ وَهَٰذِهِ الْأَنْهَارُ تَجْرِي مِن تَحْتِي ۖ أَفَلَا تُبْصِرُونَ ﴿٥١﴾

52. ನಾನು ಮೇಲೋ ಅಥವಾ ಹೀನನೂ ನಿಂದ್ಯನೂ ಆಗಿರುವ ಮತ್ತು ತನ್ನ ಮಾತನ್ನು ಕೂಡಾ ವ್ಯಕ್ತವಾಗಿ ವಿವರಿಸಲಾಗದ ಈ ವ್ಯಕ್ತಿ ಮೇಲೋ?

أَمْ أَنَا خَيْرٌ مِّنْ هَٰذَا الَّذِي هُوَ مَهِينٌ وَلَا يَكَادُ يُبِينُ ﴿٥٢﴾

53. ಇವನ ಮೇಲೆ ಬಂಗಾರದ ಕಂಕಣಗಳೇಕೆ ಇಳಿಸಲ್ಪಟ್ಟಿಲ್ಲ? ಅಥವಾ ಇವನ ಅಂಗರಕ್ಷಕರಾಗಿ ದೇವಚರರ ತುಕಡಿಯೇಕೆ ಬಂದಿಲ್ಲ?"

فَلَوْلَا أُلْقِيَ عَلَيْهِ أَسْوِرَةٌ مِّن ذَهَبٍ أَوْ جَاءَ مَعَهُ الْمَلَائِكَةُ مُقْتَرِنِينَ ﴿٥٣﴾

54. ಅವನು ತನ್ನ ಜನಾಂಗವನ್ನು ಕೀಳಾಗಿ ಕಂಡನು ಮತ್ತು ಅವರು ಅವನನ್ನು ಅನುಸರಿಸಿದರು. ವಾಸ್ತವದಲ್ಲಿ ಅವರು 'ಕರ್ಮಭ್ರಷ್ಟ'ರೇ ಆಗಿದ್ದರು.[9]

فَاسْتَخَفَّ قَوْمَهُ فَأَطَاعُوهُ ۚ إِنَّهُمْ كَانُوا قَوْمًا فَاسِقِينَ ﴿٥٤﴾

55. ಕೊನೆಗೆ ಅವರು ನಮ್ಮನ್ನು ರೇಗಿಸಿದಾಗ ನಾವು ಅವರ ಮೇಲೆ ಪ್ರತೀಕಾರ ತೀರಿಸಿದೆವು ಮತ್ತು ಅವರೆಲ್ಲರನ್ನೂ ಮುಳುಗಿಸಿ ಬಿಟ್ಟೆವು-

فَلَمَّا آسَفُونَا انتَقَمْنَا مِنْهُمْ فَأَغْرَقْنَاهُمْ أَجْمَعِينَ ﴿٥٥﴾

56. ಹಾಗೂ ಅವರನ್ನು ಅನಂತರದವರ ಪಾಲಿಗೆ ಮುಂಗಾಮಿಗಳಾಗಿಯೂ ಪಾಠಪ್ರದ ಮಾದರಿಗಳಾಗಿಯೂ ಮಾಡಿಬಿಟ್ಟೆವು-

فَجَعَلْنَاهُمْ سَلَفًا وَمَثَلًا لِّلْآخِرِينَ ﴿٥٦﴾

57. ಮರ್ಯಮರ ಪುತ್ರ ಈಸಾರ ಉದಾಹರಣೆಯನ್ನೇ ಮುಂದಿಟ್ಟ ತಕ್ಷಣ ನಿಮ್ಮ ಜನಾಂಗದವರು ಆ ಕುರಿತು ಗುಲ್ಲೆಬ್ಬಿಸಿ ಬಿಟ್ಟರು-

وَلَمَّا ضُرِبَ ابْنُ مَرْيَمَ مَثَلًا إِذَا قَوْمُكَ مِنْهُ يَصِدُّونَ ﴿٥٧﴾

58. ಮತ್ತು ನಮ್ಮ ಆರಾಧ್ಯರು ಉತ್ತಮರೋ ಅಥವಾ ಅವರೋ?

وَقَالُوا أَآلِهَتُنَا خَيْرٌ أَمْ هُوَ ۚ مَا ضَرَبُوهُ

9. ಈ ಸಂಕ್ಷಿಪ್ತವಾದ ವಚನದ ಮೂಲಕ ದೊಡ್ಡ ವಾಸ್ತವಿಕತೆಯೊಂದನ್ನು ತಿಳಿಸಲಾಗಿದೆ. ಒಬ್ಬ ವ್ಯಕ್ತಿ ಯಾವುದೇ ರಾಷ್ಟ್ರದಲ್ಲಿ ತನ್ನ ಸರ್ವಾಧಿಕಾರವನ್ನು ನಡೆಸಲು ಪ್ರಯತ್ನಿಸಿದಾಗ, ಅದಕ್ಕಾಗಿ ಬಹಿರಂಗವಾಗಿ ಎಲ್ಲಾ ವಿಧದ ಕುತಂತ್ರಗಳನ್ನು ನಡೆಸಿದಾಗ, ಮೋಸ ಮತ್ತು ವಂಚನೆಯ ಎಲ್ಲಾ ವಿಧಗಳನ್ನು ಅನುಸರಿಸಿದಾಗ, ಬಹಿರಂಗವಾಗಿಯೇ ಹಣದ ಬಲದಿಂದ ಜನರ ಒಲವನ್ನು ಖರೀದಿಸುವ ವ್ಯಾಪಾರ ನಡೆಸಿದಾಗ, ಖರೀದಿಸಲು ಸಾಧ್ಯವಾಗದವರನ್ನು ನಿಸ್ಸಂಕೋಚವಾಗಿ ತುಳಿದು ಮಣಿಸಿದಾಗ ಅವನ ವರ್ತನೆ- ಅವನು ದೇಶವಾಸಿಗಳನ್ನು ಬುದ್ಧಿ, ಚಾರಿತ್ರ್ಯ ಮತ್ತು ಸಾಮರ್ಥ್ಯಗಳಲ್ಲಿ ಅಲ್ಪರು ಎಂದು ಭಾವಿಸಿದ್ದಾನೆ ಎಂಬುದನ್ನು ಸೂಚಿಸುತ್ತದೆ. ಈ ಆತ್ಮಸಾಕ್ಷಿಯಿಲ್ಲದ ಹೇಡಿಗಳೂ ಮೂರ್ಖರೂ ಆದ ಜನರನ್ನು ಎಲ್ಲಿಗೆ ಬೇಕಾದರೂ ನಾನು ಅಟ್ಟಬಲ್ಲೆ ಎಂಬ ಅವನ ಮನೋಭಾವವನ್ನು ತಿಳಿಸುತ್ತದೆ. ಅವನು ಅದನ್ನು ಮಾತಿನಿಂದ ವ್ಯಕ್ತಪಡಿಸಬೇಕಾಗಿಲ್ಲ. ಒಂದು ವೇಳೆ ಅವನ ತಂತ್ರಗಳು ಫಲಿಸಿ, ದೇಶವಾಸಿಗಳು ಅವನ ಅಡಿಯಾಳುಗಳಾಗಿ ಮಾರ್ಪಟ್ಟರೆ ಅವರು ತಮ್ಮ ನಿಷ್ಕ್ರೀಯತೆಯ ಮೂಲಕ ತಮ್ಮ ಸ್ಥಿತಿ ಅವನ ಕಲ್ಪನೆಯಂತೆಯೇ ಇದೆ ಎಂಬುದನ್ನು ಸಾಬೀತುಪಡಿಸುತ್ತಾರೆ. ಅವರು ಈ ಹೀನಾಯ ಸ್ಥಿತಿಗೆ ಈಡಾಗಲು ಮೂಲ ಕಾರಣ ಅವರು ಮೂಲತಃ ಧರ್ಮಭ್ರಷ್ಟರಾಗಿರುವುದಾಗಿದೆ.

ಎಂದು ಕೇಳತೊಡಗಿದರು.[10] ಅವರು ಈ ಉದಾಹರಣೆಯನ್ನು ನಿಮ್ಮ ಮುಂದಿಟ್ಟಿರುವುದು ಜಗಳಕ್ಕಾಗಿ ಮಾತ್ರ. ವಾಸ್ತವದಲ್ಲಿ ಇವರು ಜಗಳಗಂಟರೇ ಆಗಿರುತ್ತಾರೆ.

لَكَ اِلَّا جَدَلًا ؕ بَلۡ هُمۡ قَوۡمٌ خَصِمُوۡنَ ﴿۵۸﴾

59. ಮರ್ಯಮರ ಪುತ್ರ ಓರ್ವ ದಾಸನೆಂಬುದರ ಹೊರತು ಇನ್ನೇನೂ ಆಗಿರಲಿಲ್ಲ. ನಾವು ಅವರಿಗೆ ಅನುಗ್ರಹ ಪ್ರದಾನ ಮಾಡಿದ್ದೆವು ಮತ್ತು ಅವರನ್ನು ಬನೀಇಸ್ರಾಈಲರ ಪಾಲಿಗೆ ನಮ್ಮ ಮಹಿಮೆಯ ದೃಷ್ಟಾಂತವಾಗಿ ಮಾಡಿಬಿಟ್ಟೆವು.

اِنۡ هُوَ اِلَّا عَبۡدٌ اَنۡعَمۡنَا عَلَيۡهِ وَجَعَلۡنٰهُ مَثَلًا لِّبَنِىۡۤ اِسۡرَآءِيۡلَ ؕ ﴿۵۹﴾

60. ನಾವಿಚ್ಛಿಸಿದರೆ ಭೂಲೋಕದಲ್ಲಿ ನಿಮ್ಮ ಉತ್ತರಾಧಿಕಾರಿಗಳಾಗಲು ನಿಮ್ಮಿಂದಲೇ ದೇವಚರರನ್ನು ಸೃಷ್ಟಿಸಬಲ್ಲೆವು-

وَلَوۡ نَشَآءُ لَجَعَلۡنَا مِنۡكُمۡ مَّلٰٓـئِكَةً فِى الۡاَرۡضِ يَخۡلُفُوۡنَ ﴿۶۰﴾

61. ಮತ್ತು ಅವರು(ಮರ್ಯಮರ ಪುತ್ರ) ವಾಸ್ತವದಲ್ಲಿ ಪುನರುತ್ಥಾನದ ಒಂದು ಕುರುಹಾಗಿದ್ದಾರೆ.[11] ಆದುದರಿಂದ ನೀವು ಈ ವಿಷಯದಲ್ಲಿ ಸಂಶಯಪಡಬೇಡಿರಿ. ನನ್ನ ಮಾತನ್ನು ಒಪ್ಪಿಕೊಳ್ಳಿರಿ. ಇದು ನೇರವಾದ ಮಾರ್ಗ.

وَاِنَّهٗ لَعِلۡمٌ لِّلسَّاعَةِ فَلَا تَمۡتَرُنَّ بِهَا وَاتَّبِعُوۡنِ ؕ هٰذَا صِرَاطٌ مُّسۡتَقِيۡمٌ ﴿۶۱﴾

62. ಶೈತಾನನು ನಿಮ್ಮನ್ನು ಅದರಿಂದ ತಡೆಯುವಂತಾಗದಿರಲಿ, ಅವನು ನಿಮ್ಮ ಪ್ರತ್ಯಕ್ಷ ಶತ್ರು.

وَلَا يَصُدَّنَّكُمُ الشَّيۡطٰنُ ۚ اِنَّهٗ لَكُمۡ عَدُوٌّ مُّبِيۡنٌ ﴿۶۲﴾

10. ಇದಕ್ಕೆ ಮೊದಲು 45ನೆಯ ಸೂಕ್ತದಲ್ಲಿ, "ನಾವು ರಹ್ಮಾನನ ಹೊರತು ಬೇರೆ ಆರಾಧ್ಯರನ್ನೂ ನಿಶ್ಚಯಿಸಿದ್ದುಂಟೇ? ಎಂದು ನಿಮಗೆ ಮುಂಚೆ ನಾವು ಕಳುಹಿಸಿದ್ದ ಎಲ್ಲಾ ಸಂದೇಶವಾಹಕರೊಡನೆ ಕೇಳಿ ನೋಡಿರಿ" ಎನ್ನಲಾಗಿತ್ತು. ಈ ಉಪನ್ಯಾಸವನ್ನು ಮಕ್ಕಾ ವಾಸಿಗಳ ಮುಂದೆ ಮಾಡಲಾದಾಗ ಒಬ್ಬ ವ್ಯಕ್ತಿ ಆಕ್ಷೇಪ ವ್ಯಕ್ತಪಡಿಸುತ್ತಾ ಹೇಳಿದನು, "ಕ್ರೈಸ್ತರು ಮರ್ಯಮರ ಪುತ್ರರನ್ನು ದೇವನ ಮಗನೆಂದು ಸಾರಿ ಆರಾಧನೆ ಮಾಡುವುದಿಲ್ಲವೇ? ಹಾಗಿರುವಾಗ ನಮ್ಮ ಆರಾಧ್ಯರುಗಳನ್ನು ಆರಾಧಿಸಬಾರದೇಕೆ?" ಹೀಗೆನ್ನುವಾಗ ಸತ್ಯನಿಷೇಧಿಗಳ ಕೂಟದಿಂದ ದೊಡ್ಡ ಅಟ್ಟಹಾಸ ಮೊಳಗಿತು. ಇದಕ್ಕೆ ನೀವೇನೆನ್ನುವಿರಿ ಎಂದು ಅವರು ಕೇಕೆ ಹಾಕತೊಡಗಿದರು.

11. ಇದರ ಇನ್ನೊಂದು ಭಾಷಾಂತರ, "ಅವರು ಪುನರುತ್ಥಾನ ದಿನದ ಬಗೆಗಿನ ಜ್ಞಾನಕ್ಕೆ ಆಧಾರವಾಗಿದ್ದಾರೆ" ಎಂದಾಗಬಹುದು. ಅವರನ್ನು "ನಿರ್ಣಾಯಕ ದಿನದ ಕುರುಹು" ಅಥವಾ "ನಿರ್ಣಾಯಕ ದಿನದ ಜ್ಞಾನದ ಆಧಾರ" ಎಂದು ಯಾವ ಅರ್ಥದಲ್ಲಿ ಹೇಳಲಾಗಿದೆ ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಅನೇಕ ವ್ಯಾಖ್ಯಾನಕಾರರ ಪ್ರಕಾರ, ಹೆಚ್ಚಿನ ಪ್ರವಾದಿವಚನಗಳಲ್ಲಿ ಉಲ್ಲೇಖಿಸಲಾಗಿರುವ ಹ.ಈಸಾರ(ಅ) ಎರಡನೆಯ ಅವತರಣದ ಕುರಿತು ಈ ಮಾತು ಹೇಳಲಾಗಿದೆ. ಆದರೆ ನಂತರದ ಉದ್ಧರಣೆ ಈ ರೀತಿಯ ಅರ್ಥ ಕಲ್ಪಿಸಲು ಅವಕಾಶ ಕೊಡುವುದಿಲ್ಲ. ಈಸಾರ(ಅ) ಎರಡನೆಯ ಅವತರಣ, ಆ ಕಾಲದಲ್ಲಿರುವ ಅಥವಾ ಅದರ ನಂತರ ಹುಟ್ಟುವ ಜನರ ಪಾಲಿಗೆ ಮಾತ್ರ ನಿರ್ಣಾಯಕ ದಿನದ ಜ್ಞಾನಕ್ಕೆ ಆಧಾರವಾಗಿರಲು ಸಾಧ್ಯ. ಮಕ್ಕಾದ ಸತ್ಯನಿಷೇಧಿಗಳೊಡನೆ, "ಆದ್ದರಿಂದ ನೀವು ಇದರ ಬಗ್ಗೆ ಸಂಶಯ ಪಡಬೇಡಿ" ಎಂದು ಹೇಳುವಂತಹ ರೀತಿಯಲ್ಲಿ ಅದು ಅವರಿಗೆ ನಿರ್ಣಾಯಕ ದಿನದ ಜ್ಞಾನಮೂಲವಾಗಲು ಸಾಧ್ಯವಿಲ್ಲ. ಆದ್ದರಿಂದ ನಮ್ಮ ದೃಷ್ಟಿಯಲ್ಲಿ ಇತರ ವ್ಯಾಖ್ಯಾನಕಾರರ ವ್ಯಾಖ್ಯಾನವೇ ಸರಿಯಾಗಿದೆ. ಅವರು, ಹ.ಈಸಾರು(ಅ) ತಂದೆಯಿಲ್ಲದೆ ಹುಟ್ಟುವುದು, ಮಣ್ಣಿನಿಂದ ಹಕ್ಕಿಗಳನ್ನು ತಯಾರಿಸುವುದು, ಮೃತರನ್ನು ಜೀವಂತಗೊಳಿಸುವುದೆಲ್ಲವೂ ನಿರ್ಣಾಯಕ ದಿನದ ಆಧಾರವೆಂದು ಸಾರಿದ್ದಾರೆ. ಈ ದೇವವಾಣಿಯ ಇಂಗಿತವೇನೆಂದರೆ, "ಯಾವ ದೇವ ತಂದೆಯಿಲ್ಲದೆ ಮಗುವನ್ನು ಹುಟ್ಟಿಸಬಲ್ಲನೋ ಹಾಗೂ ದೇವನ ದಾಸನೊಬ್ಬ ಮಣ್ಣಿನ ಮೂರ್ತಿಯಲ್ಲಿ ಜೀವತುಂಬ ಬಲ್ಲನೋ ಮತ್ತು ಮೃತರನ್ನು ಜೀವಂತಗೊಳಿಸಬಲ್ಲನೋ ಆ ದೇವನು ಮರಣದ ನಂತರ ನಿಮ್ಮೆಲ್ಲರನ್ನು ಪುನರಪಿ ಸೃಷ್ಟಿಸುವುದು ಸಾಧ್ಯವಿಲ್ಲವೆಂದು ನೀವೇಕೆ ಭಾವಿಸುತ್ತೀರಿ?

63. ಈಸಾ ಪ್ರತ್ಯಕ್ಷ ನಿದರ್ಶನಗಳೊಂದಿಗೆ ಬಂದಾಗ ಹೇಳಿದ್ದರು, "ನಾನು ನಿಮ್ಮ ಬಳಿಗೆ ಸದ್ವಿವೇಕವನ್ನು ತಂದಿದ್ದೇನೆ ಮತ್ತು ನೀವು ಪರಸ್ಪರ ಭಿನ್ನಾಭಿಪ್ರಾಯವಿಟ್ಟು ಕೊಂಡಿರುವ ಕೆಲವು ವಿಷಯಗಳ ವಾಸ್ತವಿಕತೆಯನ್ನು ನಿಮ್ಮ ಮುಂದೆ ಪ್ರಕಟಗೊಳಿಸಲಿಕ್ಕಾಗಿ ಬಂದಿದ್ದೇನೆ. ಆದುದರಿಂದ ನೀವು ಅಲ್ಲಾಹನನ್ನೇ ಭಯಪಡಿರಿ ಮತ್ತು ನನ್ನನ್ನು ಅನುಸರಿಸಿರಿ.

وَلَمَّا جَآءَ عِيسٰى بِالْبَيِّنٰتِ قَالَ قَدْ جِئْتُكُمْ بِالْحِكْمَةِ وَلِاُبَيِّنَ لَكُمْ بَعْضَ الَّذِىْ تَخْتَلِفُوْنَ فِيْهِ ۚ فَاتَّقُوا اللّٰهَ وَاَطِيْعُوْنِ ﴿٦٣﴾

64. ವಾಸ್ತವದಲ್ಲಿ ಅಲ್ಲಾಹನೇ ನನ್ನ ಪ್ರಭುವೂ ನಿಮ್ಮ ಪ್ರಭುವೂ ಆಗಿರುತ್ತಾನೆ. ನೀವು ಅವನನ್ನೇ ಆರಾಧಿಸಿರಿ, ಇದುವೇ ನೇರ ಮಾರ್ಗ."[12]

اِنَّ اللّٰهَ هُوَ رَبِّىْ وَرَبُّكُمْ فَاعْبُدُوْهُ ؕ هٰذَا صِرَاطٌ مُّسْتَقِيْمٌ ﴿٦٤﴾

65. ಆದರೆ (ಅವರ ಈ ಸುಸ್ಪಷ್ಟ ಬೋಧನೆಯ ಹೊರತಾಗಿಯೂ) ಪಂಗಡಗಳು ಪರಸ್ಪರ ಭಿನ್ನಾಭಿಪ್ರಾಯ ತಾಳಿದುವು.[13] ಆದುದರಿಂದ ಅಕ್ರಮವೆಸಗುವವರಿಗೆ ಒಂದು ವೇದನಾಯುಕ್ತ ದಿನದ ಯಾತನೆಯಿಂದ ವಿನಾಶವಿದೆ.

فَاخْتَلَفَ الْاَحْزَابُ مِنْۢ بَيْنِهِمْ ۚ فَوَيْلٌ لِّلَّذِيْنَ ظَلَمُوْا مِنْ عَذَابِ يَوْمٍ اَلِيْمٍ ﴿٦٥﴾

66. ಇವರಿಗೆ ಸುದ್ದಿಯೇ ಇಲ್ಲದಂತೆ ಪುನರುತ್ಥಾನ ದಿನವು ಇವರ ಮೇಲೆ ಹಠಾತ್ತನೆ ಬಂದೆರಗುವುದನ್ನೇ ಇವರು ಕಾಯುತ್ತಿರುವರೇ?

هَلْ يَنْظُرُوْنَ اِلَّا السَّاعَةَ اَنْ تَاْتِيَهُمْ بَغْتَةً وَّهُمْ لَا يَشْعُرُوْنَ ﴿٦٦﴾

67. ಆ ದಿನ ಬಂದಾಗ ಧರ್ಮನಿಷ್ಠರ ಹೊರತು ಇತರೆಲ್ಲ ಮಿತ್ರರೂ ಪರಸ್ಪರ ಶತ್ರುಗಳಾಗಿ ಬಿಡುವರು.

اَلْاَخِلَّآءُ يَوْمَئِذٍۢ بَعْضُهُمْ لِبَعْضٍ عَدُوٌّ اِلَّا الْمُتَّقِيْنَ ﴿٦٧﴾ ع

68-69. ಅಂದು ನಮ್ಮ ಸೂಕ್ತಗಳ ಮೇಲೆ ವಿಶ್ವಾಸವಿರಿಸಿದವರೊಡನೆ ಹಾಗೂ ಆಜ್ಞಾಪಾಲಕರಾಗಿದ್ದವರೊಡನೆ ಹೀಗೆ ಹೇಳಲಾಗುವುದು- "ನನ್ನ ದಾಸರೇ, ಇಂದು ನಿಮಗೇನೂ ಭಯವಿಲ್ಲ ಮತ್ತು ನಿಮಗೆ ದುಃಖವೂ ಉಂಟಾಗದು-

يٰعِبَادِ لَا خَوْفٌ عَلَيْكُمُ الْيَوْمَ وَلَآ اَنْتُمْ تَحْزَنُوْنَ ﴿٦٨﴾ اَلَّذِيْنَ اٰمَنُوْا بِاٰيٰتِنَا وَكَانُوْا مُسْلِمِيْنَ ﴿٦٩﴾

70. ನೀವೂ ನಿಮ್ಮ ಪತ್ನಿಯರೂ ಸ್ವರ್ಗದೊಳಗೆ ಪ್ರವೇಶಿಸಿರಿ. ನಿಮ್ಮನ್ನು ಸಂತುಷ್ಟಗೊಳಿಸಲಾಗುವುದು."

اُدْخُلُوا الْجَنَّةَ اَنْتُمْ وَاَزْوَاجُكُمْ تُحْبَرُوْنَ ﴿٧٠﴾

12. ಅರ್ಥಾತ್- ಕ್ರೈಸ್ತರು ಏನೇ ಹೇಳುತ್ತಿರಲಿ ಅಥವಾ ಮಾಡುತ್ತಿರಲಿ. ಈಸಾರಂತೂ(ಅ) ನಾನು ದೇವನಾಗಿದ್ದೇನೆ, ಅಥವಾ ದೇವಪುತ್ರನಾಗಿದ್ದೇನೆ, ಆದ್ದರಿಂದ ನನ್ನನ್ನು ಆರಾಧಿಸಿ ಎಂದು ಯಾವತ್ತೂ ಹೇಳಿರಲಿಲ್ಲ. ಅವರ ಸಂದೇಶವೂ ಎಲ್ಲಾ ಪ್ರವಾದಿಗಳು ನೀಡಿದ ಸಂದೇಶವೇ ಆಗಿತ್ತು. ಪ್ರವಾದಿವರ್ಯರೂ(ಸ) ಈಗ ಅದರೆಡೆಗೆ ಕರೆಯುತ್ತಿದ್ದಾರೆ.

13. ಅರ್ಥಾತ್- ಒಂದು ಗುಂಪು ಅವರನ್ನು ನಿರಾಕರಿಸಿತು. ಅವರು ನಿರಾಕರಣೆಯಲ್ಲಿ ಯಾವ ಮಟ್ಟಕ್ಕೆ ಹೋದರೆಂದರೆ ಅವರ ಮೇಲೆ ಜಾರಸಂತಾನವಾಗಿರುವ ಆರೋಪ ಹೊರಿಸಿದರು. ಇನ್ನೊಂದು ಗುಂಪು ಅವರನ್ನು ಸಮ್ಮತಿಸಿತು. ಅವರು ತಮ್ಮ ವಿಶ್ವಾಸದಲ್ಲಿ ಅನಿಯಂತ್ರಿತವಾಗಿ ಅತಿರೇಕವೆಸಗಿ ಅವರನ್ನು ದೇವಪುತ್ರನನ್ನಾಗಿ ಮಾಡಿದರು. ಅನಂತರ ಮಾನವನನ್ನು ದೇವನನ್ನಾಗಿ ಮಾಡಿದ್ದು ಅವರ ಪಾಲಿಗೆ ದೊಡ್ಡ ಸಮಸ್ಯೆಯಾಗಿ ಕಾಡಿತು. ಅದನ್ನು ಪರಿಹರಿಸುವುದರಲ್ಲೇ ಅವರು ಅನೇಕ ಗುಂಪುಗಳಾಗಿ ಒಡೆದು ಹೋದರು.

71. ಅವರ ಮುಂದೆ ಬಂಗಾರದ ತಟ್ಟೆಗಳೂ ಲೋಟೆಗಳೂ ಸುತ್ತು ತರಲ್ಪಡುವುವು ಮತ್ತು ಮನಮೋಹಕ ಹಾಗೂ ಕಣ್ತಣಿಸುವ ಸಕಲ ವಸ್ತುಗಳೂ ಅಲ್ಲಿ ಸಿದ್ಧವಿರುವುವು. "ನೀವಿಲ್ಲಿ ಸದಾ ವಾಸಿಸುವಿರಿ.

يُطَافُ عَلَيْهِمْ بِصِحَافٍ مِّنْ ذَهَبٍ وَّأَكْوَابٍ ۚ وَفِيهَا مَا تَشْتَهِيهِ الْأَنْفُسُ وَتَلَذُّ الْأَعْيُنُ ۚ وَأَنْتُمْ فِيهَا خَالِدُونَ ٧١

72. ನೀವು ಭೂಲೋಕದಲ್ಲಿ ಮಾಡುತ್ತಿದ್ದ ನಿಮ್ಮ ಸತ್ಕರ್ಮಗಳ ನಿಮಿತ್ತ ಈ ಸ್ವರ್ಗಕ್ಕೆ ಉತ್ತರಾಧಿಕಾರಿಗಳಾದಿರಿ.

وَتِلْكَ الْجَنَّةُ الَّتِي أُورِثْتُمُوهَا بِمَا كُنْتُمْ تَعْمَلُونَ ٧٢

73. ಇಲ್ಲಿ ನಿಮಗಾಗಿ ಧಾರಾಳ ಹಣ್ಣು ಹಂಪಲುಗಳಿದ್ದು ಅವುಗಳನ್ನು ನೀವು ತಿನ್ನುವಿರಿ."

لَكُمْ فِيهَا فَاكِهَةٌ كَثِيرَةٌ مِّنْهَا تَأْكُلُونَ ٧٣

74. ಅಪರಾಧಿಗಳಂತು ಸದಾ ನರಕ ಯಾತನೆಯಲ್ಲಿ ನರಳುತ್ತಿರುವರು.

إِنَّ الْمُجْرِمِينَ فِي عَذَابِ جَهَنَّمَ خَالِدُونَ ٧٤

75. ಅವರ ಯಾತನೆಯಲ್ಲಿ ಎಂದೂ ಕಡಿತವಾಗದು. ಅವರು ನಿರಾಶರಾಗಿ ಅದರಲ್ಲಿ ಬಿದ್ದು ಕೊಂಡಿರುವರು.

لَا يُفَتَّرُ عَنْهُمْ وَهُمْ فِيهِ مُبْلِسُونَ ٧٥

76. ಅವರ ಮೇಲೆ ನಾವು ಅಕ್ರಮವೆಸಗಲಿಲ್ಲ. ವಾಸ್ತವದಲ್ಲಿ ಸ್ವತಃ ಅವರೇ ತಮ್ಮ ಮೇಲೆ ಅಕ್ರಮವೆಸಗುತ್ತಲಿದ್ದರು.

وَمَا ظَلَمْنَاهُمْ وَلَٰكِنْ كَانُوا هُمُ الظَّالِمِينَ ٧٦

77. ಅವರು, "ಮಾಲಿಕ್[14], ನಿನ್ನ ಪ್ರಭು ನಮ್ಮನ್ನು ಮುಗಿಸಿಯೇ ಬಿಟ್ಟರೆ ಲೇಸು" ಎಂದು ರೋದಿಸುವರು. ಆಗ ಅವನು ಉತ್ತರ ಕೊಡುವನು, "ನೀವು ಹೀಗೆಯೇ ಬಿದ್ದುಕೊಂಡಿರುವಿರಿ.

وَنَادَوْا يَا مَالِكُ لِيَقْضِ عَلَيْنَا رَبُّكَ ۖ قَالَ إِنَّكُمْ مَّاكِثُونَ ٧٧

78. ನಾವು ಸತ್ಯದೊಂದಿಗೆ ನಿಮ್ಮ ಬಳಿಗೆ ಬಂದಿದ್ದೆವು. ಆದರೆ, ನಿಮ್ಮಲ್ಲಿ ಅನೇಕರಿಗೆ ಸತ್ಯವೇ ಅಪ್ರಿಯವಾಗಿತ್ತು."[15]

لَقَدْ جِئْنَاكُمْ بِالْحَقِّ وَلَٰكِنَّ أَكْثَرَكُمْ لِلْحَقِّ كَارِهُونَ ٧٨

79. ಇವರೇನಾದರೂ ಕಾರ್ಯಾಚರಣೆ ಮಾಡಲು ತೀರ್ಮಾನಿಸಿರುವರೇ?[16] ಸರಿ, ಹಾಗಾದರೆ ನಾವೂ ಒಂದು ತೀರ್ಮಾನ ಮಾಡಿಕೊಳ್ಳುತ್ತೇವೆ.

أَمْ أَبْرَمُوا أَمْرًا فَإِنَّا مُبْرِمُونَ ٧٩

14. ಮಾತಿನ ಧಾಟಿಯಿಂದಲೇ ವ್ಯಕ್ತವಾಗುವಂತೆ ಇಲ್ಲಿ ನರಕದ ಮೇಲ್ವಿಚಾರಕನನ್ನು 'ಮಾಲಿಕ್' ಎನ್ನಲಾಗಿದೆ.

15. ಸರಕಾರದ ಯಾವುದೇ ಅಧಿಕಾರಿ 'ನಾವು' ಎಂಬ ಪದ ಪ್ರಯೋಗಿಸಿದರೆ ಅದರ ಅರ್ಥ ನಮ್ಮ ಸರ್ಕಾರ ಈ ಕೆಲಸ ಮಾಡಿದೆ ಅಥವಾ ಈ ಆಜ್ಞೆ ಕೊಟ್ಟಿದೆ ಎಂದಾಗುತ್ತದೆ. ಇಲ್ಲಿ ನರಕದ ಮೇಲ್ವಿಚಾರಕ, "ನಾವು ನಿಮ್ಮ ಬಳಿಗೆ ಸತ್ಯವನ್ನು ತಂದಿದ್ದೆವು" ಎಂದು ಹೇಳುವುದು ಇದೇ ಧಾಟಿಯಲ್ಲಾಗಿದೆ.

16. ಕುರೈಶರ ಸರದಾರರು ತಮ್ಮ ನಿಗೂಢ ಸಭೆಗಳಲ್ಲಿ ಪ್ರವಾದಿವರ್ಯರ(ಸ) ವಿರುದ್ಧ ಯಾವುದಾದರೂ ನಿರ್ಣಾಯಕ ಕ್ರಮ ಕೈಗೊಳ್ಳುವ ಬಗ್ಗೆ ಚರ್ಚಿಸುತ್ತಲಿದ್ದರು. ಅದರ ಕಡೆಗೆ ಬೊಟ್ಟು ಮಾಡಿ ಈ ಮಾತು ಹೇಳಲಾಗಿದೆ.

80. ನಾವು ಇವರ ರಹಸ್ಯ ಮಾತುಗಳನ್ನೂ ಪಿಸು ನುಡಿಗಳನ್ನೂ ಕೇಳುವುದಿಲ್ಲವೆಂದು ಇವರು ಗ್ರಹಿಸಿಕೊಂಡಿರುವರೇ? ನಾವು ಎಲ್ಲವನ್ನೂ ಆಲಿಸುತ್ತಿದ್ದೇವೆ ಮತ್ತು ನಮ್ಮ ದೂತರು (ದೇವ ಚರರು) ಇವರ ಬಳಿಯಲ್ಲೇ ಬರೆಯುತ್ತಿದ್ದಾರೆ.

أَمْ يَحْسَبُونَ أَنَّا لَا نَسْمَعُ سِرَّهُمْ
وَنَجْوَاهُم ۚ بَلَىٰ وَرُسُلُنَا لَدَيْهِمْ يَكْتُبُونَ ﴿٨٠﴾

81. ನಿಜಕ್ಕೂ ರಹ್ಮಾನನಿಗೆ ಸಂತತಿ ಇರುತ್ತಿದ್ದರೆ ಎಲ್ಲರಿಗಿಂತಲೂ ಮುಂಚೆ ಆರಾಧಿಸುವವನು ನಾನೇ ಆಗಿರುತ್ತಿದ್ದೆನೆಂದು ಇವರೊಡನೆ ಹೇಳಿರಿ.

قُلْ إِن كَانَ لِلرَّحْمَٰنِ وَلَدٌ فَأَنَا
أَوَّلُ الْعَابِدِينَ ﴿٨١﴾

82. ಭೂಮಿ-ಆಕಾಶಗಳ ಸಾರ್ವಭೌಮ ಮತ್ತು ವಿಶ್ವಸಿಂಹಾಸನದ ಪ್ರಭುವು, ಇವರು ಅವನ ಮೇಲೆ ಆರೋಪಿಸುತ್ತಿರುವ ಸಕಲ ದೋಷಗಳಿಂದ ಮುಕ್ತನಾಗಿರುತ್ತಾನೆ.

سُبْحَانَ رَبِّ السَّمَاوَاتِ وَالْأَرْضِ رَبِّ
الْعَرْشِ عَمَّا يَصِفُونَ ﴿٨٢﴾

83. ಇವರಿಗೆ ಎಚ್ಚರಿಕೆ ನೀಡಲಾಗುತ್ತಿರುವ ಆ ದಿನವನ್ನು ಇವರು ಕಾಣುವ ವರೆಗೂ ಇವರನ್ನು ಇವರ ಮಿಥ್ಯ ವಿಚಾರಗಳಲ್ಲಿ ಮುಳುಗಿರಲು ಮತ್ತು ಆಟ ವಿನೋದಗಳಲ್ಲಿ ಮೈಮರೆತಿರಲು ಬಿಟ್ಟು ಬಿಡಿರಿ.

فَذَرْهُمْ يَخُوضُوا وَيَلْعَبُوا حَتَّىٰ يُلَاقُوا
يَوْمَهُمُ الَّذِي يُوعَدُونَ ﴿٨٣﴾

84. ಅವನೊಬ್ಬನೇ ಆಕಾಶದಲ್ಲೂ ಆರಾಧ್ಯನು ಮತ್ತು ಭೂಮಿಯಲ್ಲೂ ಆರಾಧ್ಯನು. ಅವನೇ ಯುಕ್ತಿಪೂರ್ಣನೂ ಸರ್ವಜ್ಞನೂ ಆಗಿರುತ್ತಾನೆ.

وَهُوَ الَّذِي فِي السَّمَاءِ إِلَٰهٌ وَفِي الْأَرْضِ
إِلَٰهٌ ۚ وَهُوَ الْحَكِيمُ الْعَلِيمُ ﴿٨٤﴾

85. ಅವನು ಅತ್ಯುನ್ನತನಾಗಿದ್ದು ಭೂಮಿ-ಆಕಾಶಗಳು ಮತ್ತು ಅವುಗಳ ನಡುವೆ ಇರುವ ಪ್ರತಿಯೊಂದು ವಸ್ತುವು ಅವನದೇ ಪ್ರಭುತ್ವ ದಲ್ಲಿದೆ. ಪುನರುತ್ಥಾನದ ಘಳಿಗೆಯ ಜ್ಞಾನವೂ ಅವನಿಗೇ ಇದೆ ಮತ್ತು ನೀವೆಲ್ಲರೂ ಅವನ ಕಡೆಗೇ ಮರಳಿಸಲ್ಪಡುವಿರಿ.

وَتَبَارَكَ الَّذِي لَهُ مُلْكُ السَّمَاوَاتِ
وَالْأَرْضِ وَمَا بَيْنَهُمَا وَعِندَهُ عِلْمُ
السَّاعَةِ وَإِلَيْهِ تُرْجَعُونَ ﴿٨٥﴾

86. ಅವನನ್ನು ಬಿಟ್ಟು ಇವರು ಯಾರನ್ನು ಪ್ರಾರ್ಥಿಸುತ್ತಿರುವರೋ ಅವರಿಗೆ ಯಾವುದೇ ಶಿಫಾರಸಿನ ಅಧಿಕಾರವಿಲ್ಲ- ಯಾರಾದರೂ ಜ್ಞಾನದ ಆಧಾರದಲ್ಲಿ ಸತ್ಯದ ಸಾಕ್ಷಿ ಹೇಳುವುದರ ಹೊರತು.[17]

وَلَا يَمْلِكُ الَّذِينَ يَدْعُونَ مِن
دُونِهِ الشَّفَاعَةَ إِلَّا مَن شَهِدَ بِالْحَقِّ
وَهُمْ يَعْلَمُونَ ﴿٨٦﴾

87. ಇವರನ್ನು ಸೃಷ್ಟಿಸಿದವನಾರೆಂದು ನೀವು ಇವರೊಡನೆ ಕೇಳಿದರೆ

وَلَئِن سَأَلْتَهُم مَّنْ خَلَقَهُمْ لَيَقُولُنَّ

17. ಅರ್ಥಾತ್- ಒಬ್ಬ ವ್ಯಕ್ತಿ ತಾನು ಯಾರನ್ನು ಆರಾಧ್ಯರಾಗಿ ಮಾಡಿಕೊಂಡಿದ್ದನೋ ಅವರು ಖಂಡಿತವಾಗಿಯೂ ಶಿಫಾರಸು ಮಾಡುವ ಸಾಮರ್ಥ್ಯ ಹೊಂದಿದ್ದಾರೆ ಮತ್ತು ಅವರು ಯಾರಿಗೆ ಬೇಕಾದರೂ ಕ್ಷಮೆ ದೊರಕಿಸಿ ಕೊಡುವಷ್ಟು ಪ್ರಭಾವವನ್ನು ಅಲ್ಲಾಹನ ಬಳಿ ಹೊಂದಿದ್ದಾರೆ ಎಂದು ಹೇಳುವುದಾದರೆ,- ಅವರು ಜ್ಞಾನದ ಆಧಾರದಲ್ಲಿ ತಮ್ಮ ಮಾತು ಸತ್ಯವಾದುದೆಂದು ಸಾಕ್ಷ್ಯವಹಿಸಬಲ್ಲರೇ?

اللّٰهُ فَاَنّٰى يُؤْفَكُوْنَ ۝٨٧

ಅಲ್ಲಾಹನೆಂದು ಸ್ವತಃ ಇವರೇ ಹೇಳುವರು.[18] ಹೀಗಿರುತ್ತ ಇವರು ಎಲ್ಲಿಂದ ಮೋಸ ಹೋಗುತ್ತಿದ್ದಾರೆ?

وَقِيْلِهٖ يٰرَبِّ اِنَّ هٰٓؤُلَاۤءِ قَوْمٌ لَّا يُؤْمِنُوْنَ ۝٨٨

88. "ಪ್ರಭೂ, ಇವರು ವಿಶ್ವಾಸವಿಡುವವರಲ್ಲ" ಎಂಬ ಸಂದೇಶವಾಹಕರ ಮಾತಿನಾಣೆ![19]

فَاصْفَحْ عَنْهُمْ وَقُلْ سَلٰمٌ ۗ فَسَوْفَ يَعْلَمُوْنَ ۝٨٩

89. ಸಂದೇಶವಾಹಕರೇ ಇವರನ್ನು ಮನ್ನಿಸಿರಿ ಮತ್ತು ನಿಮಗೆ ಸಲಾಮ್(ಶಾಂತಿ) ಎಂದು ಹೇಳಿರಿ. ಸದ್ಯವೇ ಇವರಿಗೆ ತಿಳಿದು ಬರುವುದು.

---

18. ಈ ಸೂಕ್ತಕ್ಕೆ ಎರಡು ಅರ್ಥಗಳಿವೆ. ಮೊದಲನೆಯದಾಗಿ ನೀವು ಅವರೊಡನೆಯೇ, "ನಿಮ್ಮನ್ನು ಸೃಷ್ಟಿಸಿದವರು ಯಾರು?" ಎಂದು ಕೇಳಿದರೆ ಅವರು 'ಅಲ್ಲಾಹ್' ಎಂದು ಹೇಳುವರು. ಎರಡನೆಯದಾಗಿ ನೀವು ಅವರೊಡನೆ, "ನಿಮ್ಮ ಈ ಆರಾಧ್ಯರುಗಳ ಸೃಷ್ಟಿಕರ್ತ ಯಾರು?" ಎಂದು ಕೇಳಿದರೆ ಅವರು 'ಅಲ್ಲಾಹ್' ಎಂದು ಹೇಳುವರು.

19. ಅರ್ಥಾತ್- "ಓ ಪ್ರಭೂ! ಇವರು ವಿಶ್ವಾಸವಿಡುವವರಲ್ಲ" ಎಂಬ ಪ್ರವಾದಿಯ ಮಾತಿನ ಆಣೆ, ಇವರು ವಿಚಿತ್ರ ರೀತಿಯ ಆತ್ಮವಂಚನೆಯಲ್ಲಿ ಸಿಲುಕಿದ್ದಾರೆ. ಅವರ ಮತ್ತು ಅವರ ಆರಾಧ್ಯರುಗಳ ಸೃಷ್ಟಿಕರ್ತ ಅಲ್ಲಾಹನೇ ಆಗಿದ್ದಾನೆಂದು ಅವರು ಸ್ವತಃ ಒಪ್ಪಿಕೊಳ್ಳುತ್ತಾರೆ. ಆದರೂ ಸೃಷ್ಟಿಕರ್ತನನ್ನು ಬಿಟ್ಟು ಸೃಷ್ಟಿಯ ಆರಾಧನೆಗಾಗಿ ಅವರು ಪಟ್ಟು ಹಿಡಿದಿದ್ದಾರೆ.